ಅ) ಕಲಮಲಾ ಗಿಣಿಗೇರಾ ರಾಜ್ಯ ಹೆದ್ದಾರಿ (23) ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಶ್ವ ಬ್ಯಾಂಕಿನ ನೆರವಿನಿಂದ ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಈ ಯೋಜನೆಗೆ ಬೇಕಾಗುವ ಅಂದಾಜು ಎಷ್ಟು;

ಇ) 1999-2000ನೇ ಸಾಲಿನಲ್ಲಿ ಲೋಕೊಪಯೋಗಿ ಇಲಾಖೆಯಡಿಯಲ್ಲಿ ರಾಜ್ಯ ಹೆದ್ದಾರಿಗಳ ದುರಸ್ತಿಗೆ ಒದಗಿಸಿರುವ ಒಟ್ಟು ಹಣ ಎಷ್ಟು? ಇಲ್ಲಿಯವರೆಗೆ ಖರ್ಚಾದ ಹಣ ಎಷ್ಟು? ಜಿಲ್ಲಾವಾರು ಮಾಹಿತಿ ಒದಗಿಸುವುದು

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಸ್ತೆಯು ಹಲವೆಡೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿಶ್ವ ಬ್ಯಾಂಕಿನ ನೆರವಿನಿಂದ ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಯೋಜನೆಯು ಸರ್ಕಾರಕ್ಕೆ ಇದೆ. ವಿಶ್ವ ಬ್ಯಾಂಕಿನ ಸಲಹೆಗಾರರು ವರದಿ ತಯಾರಿಸಿದ್ದು, ಪ್ರಾಥಮಿಕ ಅಂದಾಜಿನಂತೆ ಈ ಯೋಜನೆಗೆ 218.75 ಕೋಟಿ ರೂ.ಗಳು ಬೇಕಾಗಬಹುದು.

ಇ) 1999-2000ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ ರಸ್ತೆಗಳ ದುರಸ್ತಿಗೆ ಲೆಕ್ಕ ಶೀರ್ಷಿಕೆ 3054 ಅಡಿಯಲ್ಲಿ (ಜಿಲ್ಲಾ ಮುಖ್ಯ ರಸ್ತೆಗಳನ್ನೊಳಗೊಂಡಂತೆ) ದುರಸ್ತಿಗಾಗಿ ಅನುದಾನ ಮತ್ತು ಇಲ್ಲಿಯವರೆಗೆ ಮಾಡಿರುವ ಖರ್ಚುಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಪ್ರಶ್ನೆ ಸಂಖ್ಯೆ ೧೫೨೨

ಕ್ರಮ ಸಂಖ್ಯೆ	ಜಿಲ್ಲೆ	1999-2000ನೇ ಸಾಲಿನ ಅನುದಾನ	ಫೆಬ್ರವರಿ 2000ವರೆಗಿನ ಖರ್ಚು
1	ಬೆಂಗಳೂರು	1055.084	240.34
2.	ತುಮಕೂರು	514.22	94.11
3.	ಕೋಲಾರ	398.11	92.42
4.	ಮೈಸೂರು	578.77	187.63
5.	ಚಾಮರಾಜನಗರ	95.92	82.56
6.	ಮಂಡ್ಯ	640.68	221.01
7.	ಹಾಸನ	430.67	73.04
8.	ಚಿಕ್ಕಮಗಳೂರು	278.06	51.93
9.	ಶಿವಮೊಗ್ಗ	401.346	250.64
10.	ಚಿತ್ರದುರ್ಗ	265.03	75.04
11.	ದಾವಣಗೆರೆ	154.46	120.31
12.	ಮಂಗಳೂರು	307.30	67.14
13.	ಉಡುಪಿ	147.81	71.50
14.	ಕೊಡಗು	169.54	43.08
	ದಕ್ಷಿಣ ವಲಯ ಮೊತ್ತ	5437.00	1670.75
15.	ಧಾರವಾಡ	316.11	217.82

16.	ಗದಗ್	342.51	249.59
17.	ಹಾವೇರಿ	280.41	218.11
18.	ಕಾರವಾರ	486.21	303.13
19.	ಬೆಳಗಾಂವ್	1500.50	693.13
20.	ಬಾಗಲಕೋಟೆ	434.67	335.49
21.	ಬಿಜಾಪೂರ	534.20	374.35
22.	ಬಳ್ಳಾರಿ	445.56	386.13
23.	ರಾಯಚೂರು	350.29	341.68
24.	ಕೊಪ್ಪಳ	252.16	232.26
25.	ಗುಲ್ಬರ್ಗಾ	641.86	717.88
26.	ಬೀದರ್	253.02	286.11
	ಉತ್ತರ ವಲಯ ಒಟ್ಟು	5845.40	4355.68
	ದಕ್ಷಿಣ ವಲಯ ಒಟ್ಟು	5437.00	1670.75
	ಒಟ್ಟು ಮೊತ್ತ	11282.40	6026.43